ವಿಜಯವಾಣಿ e-Paper

Vijayavani e-Paper 12th Feb 2015

Cricket 5th Division Champions 2015

# ಚಾಂಪಿಯನ್ ಆರ್‌ವಿ ವಿದ್ಯಾರ್ಥಿಗಳು



ಕೆಎಸ್‌ಸಿಎ ಆಯೋಜಿಸಿದ್ದ ಪ್ರಸಕ್ತ ಸಾಲಿನ ಒಂದನೇ ಗುಂಪಿನ 5ನೇ ವಿಭಾಗದ ಲೀಗ್ ಪಂದ್ಯದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಆರ್‌ವಿ ಕಾಲೇಜ್ ಆಫ್ ಇಂಜಿನಿಯರಿಂಗ್ ತಂಡ. ತಂಡದ ಕೋಚ್ ವಿಶ್ವನಾಥ್.ಎಚ್.ಕೆ, ಮ್ಯಾನೇಜರ್ ವಿಶ್ವನಾಥ್.ಸಿ.ಎನ್., ನಾಯಕ ಪಿಯೂಶ್ ಸಿಂಗ್ ಇದ್ದರು.

ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಆಯೋಜಿಸಿದ್ದ ಪ್ರಸಕ್ತ ಸಾಲಿನ ಮೊದಲನೇ ಗುಂಪಿನ 5ನೇ ವಿಭಾಗದ ಲೀಗ್ ಪಂದ್ಯದಲ್ಲಿ ಆರ್‌ವಿ ಕಾಲೇಜ್ ಆಫ್ ಇಂಜಿನಿಯರಿಂಗ್ (ಆರ್‌ವಿಸಿಇ) ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಟೂರ್ನಿಯಲ್ಲಿ ಒಟ್ಟು 85 ತಂಡಗಳು ಭಾಗವಹಿಸಿದ್ದವು. ಅಂತಿಮ ಹಣಾಹಣಿಯಲ್ಲಿ ಯಂಗ್ ಪಯೋನೀರ್ (ವೈಪಿಸಿಸಿ) ವಿರುದ್ಧ ಆರ್‌ವಿಸಿಇ ತಂಡ ಭರ್ಜರಿ ಗೆಲುವು ಪಡೆದುಕೊಂಡಿದೆ.

ಮೊದಲ ಇನ್ನಿಂಗ್ಸ್‌ನಲ್ಲಿ ಮೊದಲು ಬ್ಯಾಟಿಂಗ್ ಆರಂಭಿಸಿದ ಆರ್‌ವಿಸಿಇ 54.3 ಓವರ್‌ಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡು 190 ರನ್ ಬಾರಿಸಿತ್ತು. ಇದನ್ನು ಬೆಂಬತ್ತಿದ ಯಂಗ್ ಪಯೋನೀರ್ 52.5 ಓವರ್‌ನಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 175 ರನ್ ಗಳಿಸಿತ್ತು.

ಎರಡನೇ ಇನ್ನಿಂಗ್ಸ್‌ನಲ್ಲಿ ಆರ್‌ವಿಸಿಇ 30 ಓವರ್‌ಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡು 183 ರನ್ ಗಳಿಸಿದರೆ, 27 ಓವರ್‌ಗೆ 134 ರನ್ ಗಳಿಸಿ ಆಲೌಟ್ ಆದ ವೈಪಿಸಿಸಿ ಪರಾಭವಗೊಂಡಿತು. ಈ ಮೂಲಕ ಆರ್‌ವಿಸಿಇ 54 ರನ್‌ಗಳಿಂದ ಜಯ ಸಾಧಿಸಿದ್ದು, 2015-16ರ ಕೆಎಸ್‌ಸಿಎ ನಡೆಸುವ ಒಂದನೇ ಗುಂಪಿನ ನಾಲ್ಕನೇ ವಿಭಾಗ ಲೀಗ್ ಪಂದ್ಯಕ್ಕೆ ಆಯ್ಕೆಯಾಗಿದೆ.